ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:          ದಿನಾಂಕ : DATE : 29/8/2020

# ಜಪಾನ್ ಪಿಎಂ ಶಿಂಜೋ ಪದತ್ಯಾಗ

## ಅನಾರೋಗ್ಯದ ಹಿನ್ನೆಲೆಯಲ್ಲಿ ಪ್ರಧಾನಿ ಹುದ್ದೆಗೆ ರಾಜೀನಾಮೆ

ಟೋಕಿಯೋ: ಜಪಾನ್‌ನ ಅತಿ ದೀರ್ಘಾವಧಿಯ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಶಿಂಜೋ ಅಬೆ (65), ತಮ್ಮ ಅನಾರೋಗ್ಯದ ಕಾರಣದಿಂದಾಗಿ ಪ್ರಧಾನಿ ಹುದ್ದೆಗೆ ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದಾರೆ. ಅವರ ಅಧಿಕಾರ ಅವಧಿ 2021ರ ಸೆಪ್ಟೆಂಬರ್‌ನಲ್ಲಿ ಮುಕ್ತಾಯವಾಗಬೇಕಿತ್ತು. ಅದಕ್ಕೂ ಮೊದಲೇ ಅವರು ಹುದ್ದೆ ತೊರೆದಿದ್ದಾರೆ.



ಸೋಮವಾರವಷ್ಟೇ ಅಬೆ ಅವರು ಜಪಾನ್‌ನಲ್ಲಿ ಹೆಚ್ಚಿನ ಅವಧಿಗೆ ಪ್ರಧಾನಿ ಹುದ್ದೆಯಲ್ಲಿದ್ದ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಅಬೆ ಅವರ ವಿರುದ್ಧ ಹಲವು ಆರೋಪಗಳು ಕೇಳಿಬಂದರೂ, ಅಲ್ಪಾವಧಿಯ ಸರ್ಕಾರಗಳನ್ನು ಕಂಡಿದ್ದ ಜಪಾನ್‌ನಲ್ಲಿ ಅವರು 2012ರ ಡಿ.26ರಿಂದ ಸತತವಾಗಿ ಅಧಿಕಾರದಲ್ಲಿರುವ ಮೂಲಕ ಸ್ಥಿರ ಸರ್ಕಾರವನ್ನು ನೀಡಿದ್ದರು. ಲಿಬರಲ್ ಡೆಮಾಕ್ರಾಟಿಕ್ ಪಕ್ಷದ ನಾಯಕರಾಗಿರುವ ಅಬೆ, 2006–2007ರ ಅವಧಿಯಲ್ಲಿ ತಮ್ಮ 52ನೇ ವಯಸ್ಸಿಗೆ ಮೊದಲ ಬಾರಿಗೆ ಪ್ರಧಾನಿಯಾದರು. ತೀರಾ ಸಂಕಷ್ಟದಲ್ಲಿದ್ದ ಜಪಾನ್‌ನ ಅರ್ಥವ್ಯವಸ್ಥೆಯನ್ನು ಗಣನೀಯವಾಗಿ ಚೇತರಿಸುವಂತೆ ಮಾಡಿದ್ದರು.

ಅನಾರೋಗ್ಯದ ಹಿನ್ನೆಲೆಯಲ್ಲಿ ಟೋಕಿಯೋದ ಆಸ್ಪತ್ರೆಗೆ ಎರಡು ಬಾರಿ ಭೇಟಿ ನೀಡಿ ವೈದ್ಯಕೀಯ ತಪಾಸಣೆಗೆ ಒಳಗಾಗಿದ್ದರು.

### ಮುಂದೆ ಯಾರು?

**ಅಬೆ ನಿರ್ಗಮನದ ಬಳಿಕ ಪ್ರಧಾನಿ ಸ್ಥಾನಕ್ಕೆ ತಾರೋ ಅಸೋ (79) ಅವರ ಹೆಸರು ಕೇಳಿಬರುತ್ತಿದೆ. ಅವರು ಹಾಲಿ ಪ್ರಧಾನಿಯ ಆಪ್ತರೂ ಹೌದು. ಪಕ್ಷದ ಮತ್ತೊಬ್ಬ ನಾಯಕ ಶಿಗೇರು ಇಶಿಬಾ, ಪರಿಸರ ಸಚಿವ ಶಿಂಜಿರೋ ಕೊಯಿಜೂಮಿ ಹೆಸರುಗಳು ಚಾಲ್ತಿಯಲ್ಲಿವೆ. ಅಬೆ ಅವರು ಭಾರತದ ಪ್ರಧಾನಿ ಮೋದಿಯವರ ಜತೆಗೆ ಆತ್ಮೀಯ ಬಾಂಧವ್ಯ ಹೊಂದಿದ್ದಾರೆ. ಮಾತ್ರವಲ್ಲ ಹಲವು ಬಾರಿ ಭಾರತ ಪ್ರವಾಸ ಕೈಗೊಂಡಿದ್ದರು.**